# ಅಪ್ಪುಕುಟ್ಟನನ್ನು ತೂಗುವುದು ಹೇಗೆ?

ಇಂದು ಹರಿಕುಮಾರ್

ಕನ್ನಡಕ್ಕೆ: ಅನಿತಾ ಪ್ರಿಯಕಾರಿಣಿ ಕಲ್ಲೆ

Bahuroopi ಬಹುರೂಪಿ

eklavya

# ಅಪ್ಪುಕುಟ್ಟನನ್ನು ತೂಗುವುದು ಹೇಗೆ?

ಕಥೆ ಮತ್ತು ಚಿತ್ರ: **ಇಂದು ಹರಿಕುಮಾರ್**


ಕನ್ನಡಕ್ಕೆ: **ಅನಿತಾ ಪ್ರಿಯಕಾರಿಣಿ ಕಲ್ಲೆ**

Bahuroopi ಬಹುರೂಪಿ

eklavya

# APPUKUTTANANNU TOOGUVUDU HEGE?

Adapted from a Chinese folktale
Story and Illustrations: **Indu Harikumar**
Kannada Translation: **Anitha Priyakarini Kalle**



CC BY NC ND Story and Illustrations: Indu Harikumar and Eklavya, September 2010

You are free to copy and distribute the text with no change for non-commercial purposes with attribution to the original author-illustrator and the publisher. For any other permissions, the author-illustrator must be contacted through Eklavya.

Kannada Publishing © Bahuroopi and Eklavya

First Edition: May 2025 / 2000 Copies
Paper: 100 gsm Maplitho (Inside) and 220 gsm Paper Board (Cover)
ISBN: 978-81-984197-5-0
Pages: 24 | Price: ₹100.00
Printed In India

parag
AN INITIATIVE OF TATA TRUSTS

This translation emerged through the Bimba Pratibimba Translation Workshop 2024 anchored by the Parag Initiative of Tata Trusts conducted in collaboration with Bahuroopi.

The development of the original and its translation is supported by the Parag Initiative of Tata Trusts.

Co-published By

**BAHUROOPI Fire Flies**
R P Regency, F-1, 2nd Floor, 2nd Cross,
P&T Colony, R T Nagar, Bangalore - 560 032
editor@bahuroopi.in
Mobile | WhatsApp Bookstore: **70191 82729**
online book store: **bahuroopi.in**

**EKLAVYA FOUNDATION**
Jamnalal Bajaj Parisar
Jatkhedi, Bhopal - 462 026 (MP)
Phone: **+91 755 297 7770-71-72**
www.eklavya.in / books@eklavya.in



ವಿಶೇಷ ನಾಡೊಂದರಿಂದ
ಬಂದ ಕಥೆಯಿದು. ಅದು ಸಂತಸ ತುಂಬಿದ,
ಶ್ರೀಮಂತ ನಾಡು.
ಅದು ಉತ್ತರಗಳ ನಾಡು...




ಅಲ್ಲಿ ಪ್ರತಿ ಪ್ರಶ್ನೆಗೂ ಉತ್ತರವಿತ್ತು.
ಪ್ರಶ್ನೆ ಹುಟ್ಟುವ ಮೊದಲೇ, ಉತ್ತರ ಹುಡುಕುವವರ ನಾಡದು.
ಯಾವುದೇ ಪ್ರಶ್ನೆಯು ಉತ್ತರ ಇಲ್ಲದೆ ಹೋಗುತ್ತಿರಲಿಲ್ಲ.

ಆದರೆ ಒಂದು ದಿನ ಎಂತಹ ಪ್ರಶ್ನೆ ಬಂತೆಂದರೆ ಅದು ಇಡೀ
ನಾಡಿನಲ್ಲಿಯೇ ಗಲಿಬಿಲಿ ಉಂಟು ಮಾಡಿತು.

“ಹೇಗೆ ಬಗೆಹರಿಸುವುದು ಇದನ್ನು?”






ಕಿರಿಯ ರಾಜಕುಮಾರ ಅಪ್ಪುಕುಟ್ಟನಿಗೆ ತಿನ್ನಿಸುತ್ತಿರುವಾಗ ಇದೆಲ್ಲವೂ ಶುರುವಾಗಿದ್ದು. ಅಪ್ಪು ಸಂತೋಷದಿಂದ ಬೆಳಗಿನ ರುಚಿಯಾದ ಉಪಹಾರ ತಿನ್ನುವಾಗ, ಕಿರಿಯ ರಾಜಕುಮಾರನ ಮನದಲ್ಲಿ ಪ್ರಶ್ನೆಯೊಂದು ಮೂಡಿತು. ಪ್ರಶ್ನೆಯೇನೋ ಸರಳವಾಗಿತ್ತು. ಅವನಿಗೆ ತಿಳಿಯಬೇಕಿತ್ತು–




ಈ ಪ್ರಶ್ನೆ ಕೇಳಿ ಎಲ್ಲಾ ಸೇವಕರು ಚಕಿತಗೊಂಡರು.
ಅವರು ಹೇಳಿದರು,





ಕೂಡಲೇ ಪ್ರಶ್ನೆ ಅರಮನೆಯಿಂದ
ಮನೆಮನೆಗೆ, ಬೀದಿಬೀದಿಗೆ,
ಭತ್ತದ ಗದ್ದೆಗಳಿಗೆ
ಆಟದ ಬಯಲಿಗೆ ಪಯಣಿಸಿತು.
ಎಲ್ಲರೂ ಕೇಳಿದ್ದು ಒಂದೇ,
**"ಅಪ್ಪುಕುಟ್ಟನನ್ನು ತೂಗುವುದು ಹೇಗೆ?"**



“ಅವರ ಬಳಿ ತಕ್ಕಡಿ ಇರಲಿಲ್ಲವೇ?”


“ಅದನ್ನು ಬಳಸಿ ಅವರು
ಅಪ್ಪುಕುಟ್ಟನನ್ನು ತೂಗಲಿಲ್ಲ ಏಕೆ?”



ತಕ್ಕಡಿಯಂತೂ ಇತ್ತು. ಅವರು ತೂಗಲೂ ಪ್ರಯತ್ನಿಸಿದರು.
ಅವರು ಸುಲಭದಲ್ಲಿ ಬಿಡುವವರಲ್ಲ, ತೂಕದ ಯಂತ್ರಗಳನ್ನು
ವಿಶೇಷವಾಗಿ ತಯಾರಿಸಿದರು ಕೂಡಾ.
ಆದರೆ, ಕೆಲವೊಂದು ಅಪ್ಪುವಿಗೆ ಚಿಕ್ಕದಾದವು.



ಇನ್ನು ಕೆಲವು ಅಪ್ಪು ತನ್ನ ಕಾಲನ್ನು ಊರಿದೊಡನೆ
ಮುರಿದೇ ಹೋದವು.




ಇನ್ನು ಕೆಲವನ್ನು ನೋಡಿ ಜನರು
ಬೆರಗಾದರು,
“ಇದರಿಂದ ಅಪ್ಪುಕುಟ್ಟನನ್ನು
ತೂಗುವುದಾದರೂ ಹೇಗೆ?”



ನಾವು ಒಂದು ಆನೆಯ ಬಗ್ಗೆ ಮಾತನಾಡುತ್ತಿದ್ದೇವೆ
ಎಂದು ನಿಮಗೆ ಈಗಾಗಲೇ ಗೊತ್ತಾಗಿರಬೇಕು.
ಅದೂ ಅಂತಿಂಥ ಆನೆಯಲ್ಲ, ರಾಜ ಆನೆ.

ಈಗ, ಈ ರಾಜ ಆನೆ ತೂಕವೇ
ಒಂದು ದೊಡ್ಡ ರಾಜ ಸಮಸ್ಯೆ ಆಗಿದೆ.






ಆಗ ಪುಟಾಣಿ ಮೀನೂವಿಗೆ ಒಂದು ಉಪಾಯ ಹೊಳೆಯಿತು.

“ಅದು ಬಹಳ ಸರಳ” ಎಂದು ಆಕೆ ಯೋಚಿಸಿದಳು.


ಅರಮನೆಯ ಕಡೆಗೆ ಹೊರಟೇಬಿಟ್ಟಳು.

ರಾಜ ಅವಳ ಮಾತನ್ನು ಆಲಿಸಿದ.
ಆಲಿಸಿ, ಮತ್ತೆ ಯೋಚಿಸಿದ. ಯೋಚಿಸಿ ಮತ್ತೆ ಹೇಳಿದ.






ಮೀನೂ, ರಾಜನ ಸೇವಕರು
ಮತ್ತು ಅಪ್ಪುಕುಟ್ಟನ್–
ಎಲ್ಲರೂ ನದಿಯ ತೀರಕ್ಕೆ ಹೋದರು.
ಅಪ್ಪುವನ್ನು ಒಂದು ದೋಣಿಗೆ
ಹತ್ತಿಸಿದರು.



ದೋಣಿ ಮುಳುಗಲು ಆರಂಭಿಸಿತು
ಇನ್ನೂ... ಇನ್ನೂ... ಇನ್ನೂ...


ದೋಣಿ ಮುಳುಗುವುದು ನಿಂತಾಗ,
ದೋಣಿ ಎಲ್ಲಿಯವರೆಗೆ ಮುಳುಗಿತೋ
ಆ ಮಟ್ಟವನ್ನು ಮೀನೂ ಗುರುತು
ಮಾಡಿದಳು.

ಅಪ್ಪುವನ್ನು ಕೆಳಗೆ ಇಳಿಸಿದರು.




ಆಮೇಲೆ ದೋಣಿಗೆ
ಇಟ್ಟಿಗೆಗಳನ್ನು ತುಂಬಿಸಲಾಯಿತು.
ಇಟ್ಟಿಗೆಗಳು ಹೆಚ್ಚುತ್ತಾ
ಹೋದಂತೆ, ದೋಣಿ ನೀರಿನಲ್ಲಿ
ಮುಳುಗತೊಡಗಿತು.

ಇನ್ನೂ... ಇನ್ನೂ... ಇನ್ನೂ...




ಗೆರೆ ಎಳೆದ ಗುರುತಿನವರೆಗೆ
ಅದು ಮುಳುಗಿದಾಗ ಮೀನೂ
“ನಿಲ್ಲಿಸಿ! ನಿಲ್ಲಿಸಿ! ಇನ್ನು ಇಟ್ಟಿಗೆ ಬೇಡ!”
ಎಂದು ಕೂಗಿದಳು.



ಆನಂತರ ದೋಣಿಯಲ್ಲಿ ಇದ್ದ ಇಟ್ಟಿಗೆಗಳನ್ನು
ತೂಗಿದರು. ಅಪ್ಪುಕುಟ್ಟನ ತೂಕವನ್ನು
ಕಂಡುಹಿಡಿದದ್ದು ಹೀಗೆ.

ಅದು ಎಷ್ಟು ತೂಗಿತು ಗೊತ್ತೇ?


5,000 ಕಿಲೋ...


ಬರೋಬ್ಬರಿ
5,000 ಕಿಲೋ...!

ಅಪ್ಪುಕುಟ್ಟನಿಗೆ ಬೆಳಗಿನ ಉಪಹಾರ ತಿನ್ನಿಸುತ್ತಿರುವಾಗ,
"ಅಪ್ಪುವಿನ ತೂಕ ಎಷ್ಟಿರಬಹುದು"
ಎಂಬ ಪ್ರಶ್ನೆ ಕಿರಿಯ ರಾಜಕುಮಾರನ ಮನಸ್ಸಿನಲ್ಲಿ
ಪುಟಿಯಿತು.

ಕೂಡಲೇ ಇಡೀ ನಾಡಿಗೆ ನಾಡೇ
ಈ ಒಗಟನ್ನು ಬಿಡಿಸಲು ಮುಂದಾಯಿತು.
ಕೊನೆಗೂ, ಪುಟಾಣಿ ಮೀನೂ ಉತ್ತರ
ಕಂಡು ಹಿಡಿದಳು.

**ಬನ್ನಿ, ಅದು ಹೇಗೆ**
**ಎಂದು ತಿಳಿಯಿರಿ...**

ಮಕ್ಕಳೊಡನೆ ಸದಾ ಕೆಲಸ
ಮಾಡಲು ಇಷ್ಟಪಡುವ **ಇಂದು ಹರಿಕುಮಾರ್**
ಮಕ್ಕಳ ಸಾಹಿತಿ ಮತ್ತು ಚಿತ್ರ ಕಲಾವಿದೆ.

**ಅನಿತಾ ಪ್ರಿಯಕಾರಿಣಿ ಕಲ್ಲೆ** ಅವರಿಗೆ ಮಕ್ಕಳ ಲೋಕದಲ್ಲಿ
ಕಳೆದು ಹೋಗುವುದು ತುಂಬಾ ಇಷ್ಟ.
ಇವರು ಮಕ್ಕಳ ಶಿಕ್ಷಣ ತಜ್ಞೆ. ಅಪ್ಪುಕುಟ್ಟನ್
ಇವರಿಗೂ ಇಷ್ಟ.

Bahuroopi ಬಹುರೂಪಿ
eklavya
parag AN INITIATIVE OF TATA TRUSTS

9 788198 419750

Price: ₹100.00